ಕಾಮೆಡ್-ಕೆ ಮುಖಾಂತರ ಕೇಂದ್ರೀಕೃತ ಪ್ರವೇಶ ಪ್ರಕ್ರಿಯೆಯನ್ನು 2006-07ನೇ ಸಾಲಿನಿಂದ ಮಾತ್ರವೇ ಮಾಡಲು ತೀರ್ಮಾನಿಸಿದ್ದುದರಿಂದ 2006-07ನೇ ಶೈಕ್ಷಣಿಕ ಸಾಲಿನಿಂದ ಮಾತ್ರ ಮಾಡಲಾಗಿದೆ. ಆ ಸಾಲಿನ ವಿವರವನ್ನು ಈ ಕೆಳಕಂಡಂತೆ ನೀಡಲಾಗಿದೆ.

ಕೋರ್ಸು	ರಾಜ್ಯದ ವಿದ್ಯಾರ್ಥಿಗಳಿಗೆ ಹಂಚಿಕೆ	ಹೊರ ರಾಜ್ಯದ ವಿದ್ಯಾರ್ಥಿಗಳಿಗೆ ಹಂಚಿಕೆ	ಒಟ್ಟು ಹಂಚಿಕೆ
ವೈದ್ಯಕೀಯ	79	580	659
ದಂತ	28	294	322
ಇಂಜಿನಿಯರಿಂಗ್	3457	2098	5555

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

540 (473) ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ) :- ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಗೆ ಮಂಜೂರಾಗಿರುವ ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಶಿಕ್ಷಕರ ಸಂಖ್ಯೆ ಎಷ್ಟು; (ಪ್ರತಿ ವಿಧಾನಸಭಾ ಕ್ಷೇತ್ರದ ವಿವರಗಳನ್ನು ಒದಗಿಸುವುದು);

ಆ) ಈ ಪೈಕಿ ಈಗ ಭರ್ತಿಯಾಗಿರುವ ಶಿಕ್ಷಕರ ಹುದ್ದೆಗಳ ಸಂಖ್ಯೆ ಎಷ್ಟು; ಖಾಲಿ ಇರುವ ಶಿಕ್ಷಕರ ಹುದ್ದೆಗಳ ಸಂಖ್ಯೆ ಎಷ್ಟು; (ವಿಧಾನಸಭಾ ಕ್ಷೇತ್ರವಾರು ವಿವರಗಳನ್ನು ಒದಗಿಸುವುದು);

ಇ) ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರದ ಮುಂದಿರುವ ಕ್ರಮಗಳೇನು?

ಶ್ರೀ ಬಸವರಾಜ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ)

ಕ್ರ.ಸಂ.	ತಾಲ್ಲೂಕು (ಕ್ಷೇತ್ರ)	ಪ್ರಾಥಮಿಕ ಶಾಲಾ	ಪ್ರೌಢಶಾಲಾ
1	ಔರಾದ್	1297	187
2	ಬಸವಕಲ್ಯಾಣ	1051	178
3	ಭಾಲ್ಕಿ	992	170
4	ಬೀದರ್	966	169
5	ಹುಲಸೂರು	911	101
6	ಹುಮ್ನಾಬಾದ್	941	201
	ಒಟ್ಟು	**6158**	**1006**

ಆ)

ಕ್ರ.ಸಂ.	ತಾಲ್ಲೂಕು (ಕ್ಷೇತ್ರ)	ಪ್ರಾಥಮಿಕ ಶಾಲಾ		ಪ್ರೌಢಶಾಲಾ	
		ಭರ್ತಿ	ಖಾಲಿ	ಭರ್ತಿ	ಖಾಲಿ
1	ಔರಾದ್	1252	45	181	06
2	ಬಸವಕಲ್ಯಾಣ	1009	42	169	09
3	ಭಾಲ್ಕಿ	866	132	162	08
4	ಬೀದರ್	953	11	164	05
5	ಹುಲಸೂರು	880	31	94	07
6	ಹುಮ್ನಾಬಾದ್	920	21	183	18
	ಒಟ್ಟು	**5876**	**282**	**953**	**53**

ಇ) ಬೀದರ್ ಜಿಲ್ಲೆಯ ಹುದ್ದೆಗಳು ಸೇರಿದಂತೆ ರಾಜ್ಯದಲ್ಲಿ ಖಾಲಿ ಇರುವ 8939 ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿ ಸಂಬಂಧ ಎಲ್ಲಾ ಜಿಲ್ಲೆಗಳಿಂದ ಮ್ಯಾಟ್ರಿಕ್ಸ್ ತರಿಸಲಾಗುತ್ತಿದ್ದು, ಇನ್ನೊಂದು ವಾರದಲ್ಲಿ ಅಧಿಸೂಚನೆ ಹೊರಡಿಸಲಾಗುವುದು.

ಪ್ರೌಢಶಾಲಾ ಶಿಕ್ಷಕರ ನೇಮಕಾತಿಗಾಗಿ ಆಯ್ಕೆ ಪ್ರಾಧಿಕಾರಿಯಾದ ವಿಭಾಗೀಯ ಸಹ ನಿರ್ದೇಶಕರುಗಳ ಸಭೆಯನ್ನು ನಡೆಸಲಾಗಿದೆ. ಜಿಲ್ಲಾ ಉಪನಿರ್ದೇಶಕರುಗಳಿಂದ ಮ್ಯಾಟ್ರಿಕ್ಸ್ ಬಂದ ನಂತರ ಅಧಿಸೂಚನೆಯನ್ನು ಹೊರಡಿಸಲಾಗುವುದು.